**ಪಿ.ಡಬ್ಲ್ಯೂ-1**

ದಿನಾಂಕಃ **08-08-2023** ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.

ಪಾಟೀ ಸವಾಲು ಶ್ರೀ ಕೆ.ಎ.ಆರ್. ವಕೀಲರಿಂದಃ-

ನಾನು ದಾವಾ ಆಸ್ತಿಗಳನ್ನು ನೋಡಿದ್ದೇನೆ. ದಾವಾ ಆಸ್ತಿಗಳು ಮೊದಲು ನನ್ನ ತಂದೆಯವರಿಗೆ ಸೇರಿದಂತಹ ಆಸ್ತಿಗಳಾಗಿದ್ದವು ಎನ್ನುವುದು ಸರಿ. ನನ್ನ ತಂದೆಯವರು ದಾವಾ ಆಸ್ತಿಗಳನ್ನು ಕೆ.ಎಸ್.ಎಫ್.ಸಿ. ಹಾಸನಗೆ ಆಧಾರ ಮಾಡಿ ಸಾಲ ಪಡೆದುಕೊಂಡಿದ್ದರು ಎನ್ನುವುದು ಸರಿ. ಸದರಿ ಸಾಲವನ್ನು ನನ್ನ ತಂದೆಯವರು ತೀರಿಸದೇ ಇದ್ದ ಕಾರಣ 2009 ರಲ್ಲಿ ಕೆ.ಎಸ್.ಎಫ್.ಸಿ. ರವರು ಸದರಿ ಆಸ್ತಿಯನ್ನು ಹರಾಜಿಗೆ ತಂದಿದ್ದರು ಎನ್ನುವುದು ಸುಳ್ಳು. ಸದರಿ ಸಾಲದ ಹಣವನ್ನು ನೀವಾಗಲೀ ನಿಮ್ಮ ತಂದೆಯವರಾಗಲೀ ಕಟ್ಟಿದ್ದೀರಾ? ಅದು ನನ್ನ ತಂದೆಯವರಿಗೆ ಗೊತ್ತು ನನಗೆ ಗೊತ್ತಿಲ್ಲ. ವಾದ ಪತ್ರದಲ್ಲಿ ವಾದಿಯು ದಾವಾಆಸ್ತಿಗಳನ್ನು ದಿಃ 21-03-2009 ರಂದು ಹರಾಜಿನಲ್ಲಿ ಖರೀದಿ ಮಾಡಿದ್ದಾರೆ ಎಂದು ಬರೆದಿದ್ದಾರೆ ಅದನ್ನು ನೀವು ಓದಿದ್ದೀರಾ ಎನ್ನುವ ಪ್ರಶ್ನೆಗೆ ಸಾಕ್ಷಿ ಹೌದು ಎನ್ನುತ್ತಾರೆ. ನಾನು ಸದರಿ ವಿಷಯವು ನಿಜನೋ ಸುಳ್ಳೋ ಎಂದು ಕೆ.ಎಸ್.ಎಫ್.ಸಿ. ರವರಿಗೆ ವಿಚಾರಣೆ ಮಾಡಿಲ್ಲ ಆದರೆ ಅದು ಸುಳ್ಳು ಎಂದು ಹೇಳುತ್ತಾರೆ. ಕೆ.ಎಸ್.ಎಫ್.ಸಿ. ರವರು ದಾವಾ ಆಸ್ತಿಯನ್ನು ಹರಾಜು ಮಾಡಿಲ್ಲ ಎಂದು ತೋರಿಸಲು ನನ್ನ ಬಳಿ ಯಾವುದೇ ದಾಖಲಾತಿ ಇಲ್ಲ ಎನ್ನುವುದು ಸರಿ. ವಾದಿಯು ಹಾಜರು ಮಾಡಿರುವ ದಾಖಲೆಗಳನ್ನು ನಾನು ನೋಡಿ ತಿಳಿದುಕೊಂಡಿದ್ದೇನೆ. ನನ್ನ ತಂದೆಯವರು ಕೆ.ಎಸ್.ಎಫ್.ಸಿ. ಹಾಗೂ ವಾದಿಯ ಮೇಲೆ ದಾವಾ ಆಸ್ತಿಯನ್ನು ಹರಾಜು ಮಾಡಿದ ಬಗ್ಗೆ ಪ್ರಶ್ನಿಸಿ ಡಿ.ಆರ್.ಟಿ. ಬೆಂಗಳೂರಿನಲ್ಲಿ ಕೇಸು ಹಾಕಿದ್ದರು ಎಂಬುವ ವಿಷಯ ನನಗೆ ಗೊತ್ತಿಲ್ಲ. ನನ್ನ ತಂದೆಯವರು ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಹರಾಜನ್ನು ಪ್ರಶ್ನಿಸಿ ರಿಟ್ ಅರ್ಜಿ ಹಾಕಿದ್ದರು ಎನ್ನುವುದು ಸರಿ. ಸದರಿ ರಿಟ್ ಅರ್ಜಿಯಲ್ಲಿ ಮಾನ್ಯ ಹೈಕೋರ್ಟ್ ನವರು ದಿಃ24-01-2014 ರಂದು ಒಂದು ಆದೇಶ ಮಾಡಿ ನನ್ನ ತಂದೆಯವರಿಗೆ ಡಿ.ಆರ್.ಟಿ. ಯ ಮುಂದೆ ಹಾಜರಾಗಲು ತಿಳಿಸಿದರು ಎನ್ನುವುದು ಸರಿ. ನನ್ನ ತಂದೆಯವರು ಡಿ.ಆರ್.ಟಿ.ಯ ಮುಂದೆ ಮೇಲ್ಮನವಿ ಸಲ್ಲಿಸಲಿಲ್ಲ ಹಾಗೂ ಏನೂ ಕೇಳಲಿಲ್ಲ ಎನ್ನುವುದು ಸರಿ ಆಗ ಅವರಿಗೆ ಹುಷಾರಿರಲಿಲ್ಲ. ದಿಃ22-04-2009 ರಂದು ವಾದಿಗೆ ಕೆ.ಎಸ್.ಎಫ್.ಸಿ. ಯವರು ದಾವಾ ಆಸ್ತಿಯ ಸ್ವಾಧೀನ ಕೊಟ್ಟರು ಎನ್ನುವುದು

ಸುಳ್ಳು. ವಾದ ಪತ್ರದಲ್ಲಿ ಹೇಳಿರುವ ಚೆಕ್ಕುಬಂಧಿಯಲ್ಲಿರುವ ಆಸ್ತಿಗಳ ಬಗ್ಗೆ ಈ ಕೇಸಿನ ವ್ಯಾಜ್ಯ ನಡೆಯುತ್ತಿದೆ ಹಾಗೂ ಸದರಿ ಚೆಕ್ಕುಬಂಧಿ ನನ್ನ ತಂದೆಯವರ ಆಸ್ತಿಯ ಚೆಕ್ಕುಂಬಧಿಯಾಗಿರುತ್ತದೆ ಎನ್ನುವುದು ಸರಿ. ದಾವಾ ಆಸ್ತಿಗಳ ಸ್ವಾಧೀನಕ್ಕೆ ನಾವುಗಳು ತೊಂದರೆ ಕೊಡುತ್ತಿದ್ದೇವೆ ಎಂದು ವಾದಿಯು ಓ.ಎಸ್.440/12 ನ್ನು ಹಾಕಿದ್ದರು ಎನ್ನುವುದು ಸರಿ ಮುಂದುವರೆದು ಸಾಕ್ಷಿಯು ಸ್ವಾಧೀನದಲ್ಲಿ ನಾವು ಇದ್ದೇವೆ ನಾವು ಯಾವುದೇ ತೊಂದರೆ ಕೊಟ್ಟಿಲ್ಲ ಆದರೆ ಅವರು ಕೇಸು ಹಾಕಿರುವುದು ನಿಜ ಎಂದು ಹೇಳುತ್ತಾರೆ. ನನ್ನ ತಂದಯವರು ದಾವಾ ಆಸ್ತಿಗೆ ಸಂಬಂಧಪಟ್ಟ ಹಾಗೆ ಓ.ಎಸ್.55/09 ನ್ನು ಕೆ.ಎಸ್.ಎಫ್.ಸಿ. ವಿರುದ್ಧ ಹಾಕಿ ದಾವಾ ಆಸ್ತಿಗಳನ್ನು ಹರಾಜು ಮಾಡಬಾರದು ಎಂದು ಕೇಳಿಕೊಂಡಿದ್ದರು ಎನ್ನುವುದು ಸರಿ. ದಿಃ16-01-2010 ರಂದು ಆ ಕೇಸು ವಜಾ ಆಯಿತು ಎನ್ನುವ ಪ್ರಶ್ನೆಗೆ ಸಾಕ್ಷಿ ಇರಬೇಕು ಎಂದು ಹೇಳುತ್ತಾರೆ. ದಾವಾ ಆಸ್ತಿಗಳು ಅರಸೀಕೆರೆ ಮುನ್ಸಿಪಾಲಿಟಿಯ ಅಧಿಕಾರ ವ್ಯಾಪ್ತಿಯಲ್ಲಿ ಬರುತ್ತವೆ ಎನ್ನುವುದು ಸರಿ. ದಾವಾ ಆಸ್ತಿಗಳ ಖಾತೆಗಳು 467/4444 ಹಾಗೂ 468/4445 ಆಗಿರುತ್ತದೆ ಎನ್ನುವುದು ಸರಿ. ನನ್ನ ತಂದೆಯವರಾಗಲೀ ನಾನಾಗಲೀ ವಾದಿಯ ಸ್ವಾಧೀನಕ್ಕೆ ತೊಂದರೆ ಕೊಡಬಾರದು ಎಂದು ಆದೇಶ ಆಗಿದೆ ಎನ್ನುವ ವಿಷಯ ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ನಾನೇ ಆಸ್ತಿಯ ಸ್ವಾಧೀನದಲ್ಲಿದ್ದೇನೆ ಎಂದು ಹೇಳುತ್ತಾರೆ. ದೇವರಾಜೇಗೌಡ ರವರು ಬೇರೆ ಊರಿನಲ್ಲಿ ವಾಸವಾಗಿದ್ದಾರೆ ಎಂದು ತಿಳಿದುಕೊಂಡು ಅವರಿಗೆ ಗೊತ್ತಿಲ್ಲದ ಹಾಗೆ ಬಲವಂತವಾಗಿ ಆಸ್ತಿಯ ಸ್ವಾಧೀನವನ್ನು ಓ.ಎಸ್. 460/12 ನಡೆಯುವಾಗ ಪಡೆದುಕೊಂಡಿದ್ದೇವೆ ಎನ್ನುವುದು ಸುಳ್ಳು. ನಾವು ಪದೇ ಪದೇ ವಾದಿಯ ಸ್ವಾಧೀನಕ್ಕೆ ತೊಂದರೆ ಕೊಡುತ್ತಿದ್ದೇವೆ ಎಂದು ವಾದಿಯವರು ಪೋಲೀಸ್ ಪ್ರೊಟೆಕ್ಷನ್ ಆದೇಶ ಪಡೆದುಕೊಂಡಿದ್ದಾರೆ ಎನ್ನುವುದು ಸುಳ್ಳು. ಪೋಲೀಸರು ದಿಃ17-09-2019 ರಂದು ನನಗೆ ಹಾಗೂ ವಾದಿಗೆ ಅವರು ದಾವಾ ಆಸ್ತಿಯ ಬಳಿ ಬರುತ್ತಾರೆ ಅಲ್ಲಿ ಹಾಜರಿರಿ ಎಂದು ಹೇಳಿದ್ದು ನಿಜ. ನಾನು ದಿಃ16-09-2019 ರಂದು ರಾತ್ರೋ ರಾತ್ರಿ ಅಕ್ರಮ ಪ್ರವೇಶ ಮಾಡಿದ್ದೇನೆ ಎನ್ನುವುದು ಸುಳ್ಳು. ದಿಃ17-09-2019 ರಂದು ಪೋಲೀಸರು ದಾವಾ ಆಸ್ತಿಯ ಬಳಿ ಬಂದಿದ್ದರು. ಪೋಲೀಸರು ದಾವಾ ಆಸ್ತಿಗಳ ಬಂದಾಗ ವಾದಿ ದೇವರಾಜೇಗೌಡ ಕೂಡ ಅಲ್ಲಿ ಹಾಜರಿದ್ದರು ನಾನು ಇದ್ದೆ. ಆಗ ನಾನು ಮೊದಲಿನಿಂದ ದಾವಾ ಆಸ್ತಿಯ ಸ್ವಾಧೀನದಲ್ಲಿದ್ದೇನೆ ಎಂದು ಪೋಲೀಸರಿಗೆ ಸುಳ್ಳು ಹೇಳಿದ್ದೆ ಎನ್ನುವುದು

ಸುಳ್ಳು. ಪುನಃ 20-09-2019 ರಂದು ದಾವಾ ಆಸ್ತಿಯ ಬಳಿ ಬರುವುದಾಗಿ ಪೋಲೀಸರು ನನಗೆ ಹಾಗೂ ವಾದಿಗೆ ಹೇಳಿದ್ದರು ಎನ್ನುವುದು ಸರಿ. ಆದರೆ ಅವರು ಬರಲಿಲ್ಲ. ಆ ದಿನ ಅಲ್ಲಿ ವಾದಿ ಅಥವಾ ಪೋಲೀಸರು ಯಾರು ಬರಲಿಲ್ಲ. ದಾವಾ ಆಸ್ತಿಯು ವಾದಿಗೆ ಸೇರಿಲ್ಲ. ದಿಃ20-09-2019 ರಂದು ವಾದಿ ಹಾಗೂ ಪೋಲೀಸರು ಅಲ್ಲಿ ಬಂದಿದ್ದರು ಆಗ ನಾನು ದಾವಾ ಆಸ್ತಿಗಳು ನನಗೆ ಸಂಬಂಧಪಟ್ಟ ಆಸ್ತಿಗಳು ಎಂದು ಗಲಾಟೆ ಮಾಡಿ ಅವರನ್ನು ಕಳುಹಿಸಿದ್ದೇನೆ ಎನ್ನುವುದು ಸುಳ್ಳು. ಕೆ.ಎಸ್.ಎಫ್.ಸಿ. ರವರು ದಾವಾ ಆಸ್ತಿಗಳನ್ನು ಹರಾಜು ಮಾಡಿದಾಗ ವಾದಿ ಸದರಿ ಆಸ್ತಿಗಳನ್ನು ಖರೀದಿ ಮಾಡಿರುವ ವಿಷಯ ನನಗೆ ಹಾಗೂ ನನ್ನ ತಂದೆಯವರಿಗೆ ಗೊತ್ತಿತ್ತು ಎನ್ನುವುದು ಸುಳ್ಳು. ನಾನು ವಾದಿಗೆ ಸೇರಿದ ಆಸ್ತಿಯನ್ನು ಅಕ್ರಮವಾಗಿ ಸ್ವಾಧೀನ ಪಡೆದುಕೊಂಡು ಅದನ್ನು ಅಕ್ರಮವಾಗಿ ಕಬಳಿಸಿಕೊಳ್ಳಲು ಈಗ ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ

<u>ಮರು ವಿಚಾರಣೆಃ ಇಲ್ಲಾ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿದಾರರ ಸಾಕ್ಷ್ಯವನ್ನು ಗಣಕೀಕೃತ ಮಾಡಿಕೊಳ್ಳಲಾಯಿತೆಂದು ಈ ಮೂಲಕ ದೃಢೀಕರಿಸಿರುತ್ತೇನೆ.)

(ಸಾ ಓ ಹೇ ಕೇ ಸ ಇ ಎಂದು ಒಪ್ಪಿರುತ್ತಾರೆ)

**( ಅನಿತ, ಜಿ. )**
ಹಿರಿಯ ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ.
ಅರಸೀಕೆರೆ. **08-08-2023.**